# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1001 |
| ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ |
| ಉತ್ತರಿಸುವ ದಿನಾಂಕ | 24-07-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಿಂದ ಕೈಲಾಸ, ಮಾನಸ ಸರೋವರ, ಚಾರ್ ಧಾಮ್ ಮತ್ತು ಕಾಶಿಯಾತ್ರೆಯನ್ನು ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಸರ್ಕಾರದಿಂದ ಸಹಾಯಧನ ನೀಡಲಾಗುತ್ತಿದಯೇ; ಹಜ್ ಯಾತ್ರೆಗಳಿಗೆ ಎಷ್ಟು ಮತ್ತು ಕೈಲಾಸ, ಮಾನಸ ಸರೋವರ ಯಾತ್ರಿಗಳಿಗೆ ಎಷ್ಟು ಸಹಾಯಧನ ನೀಡಲಾಗುತ್ತದೆ;</td><td>ಕರ್ನಾಟಕ ರಾಜ್ಯದಿಂದ ಕೈಲಾಸ, ಮಾನಸ ಸರೋವರ, ಚಾರ್ ಧಾಮ್ ಮತ್ತು ಕಾಶಿಯಾತ್ರೆಯನ್ನು, ಕರ್ನಾಟಕ ಭಾರತ್ ಗೌರವ್ ಕಾಶಿ - ಗಯಾ ದರ್ಶನ ಮತ್ತು ಕರ್ನಾಟಕ ಭಾರತ್ ಗೌರವ್ ದಕ್ಷಿಣ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಈ ಕೆಳಕಂಡಂತೆ ಸಹಾಯಧನ ನೀಡಲಾಗುತ್ತಿದೆ.
<table>
<tr><th>ಕ್ರ. ಸಂ</th><th>ಯೋಜನೆಗಳ ವಿವರ</th><th>ಸರ್ಕಾರದಿಂದ ಸಹಾಯ ಧನ ನೀಡುವ ವಿವರ (ರೂ. ಗಳಲ್ಲಿ)</th></tr>
<tr><td>1</td><td>ಕೈಲಾಸ ಮಾನಸ ಸರೋವರ</td><td>30,000/-</td></tr>
<tr><td>2</td><td>ಚಾರ್‌ಧಾಮ್</td><td>20,000/-</td></tr>
<tr><td>3</td><td>ಕಾಶಿ ಯಾತ್ರೆ</td><td>5,000/-</td></tr>
<tr><td>4</td><td>ಭಾರತ್ ಗೌರವ್ ಕಾಶಿ - ಗಯಾ ದರ್ಶನ ಯೋಜನೆ</td><td>17,500/-</td></tr>
<tr><td>5</td><td>ಭಾರತ್ ಗೌರವ್ ದಕ್ಷಿಣ ಯಾತ್ರೆ ಯೋಜನೆ</td><td>10,000/-</td></tr>
</table>
ಹಜ್-ಯಾತ್ರೆಯು ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡದೆ ಇರುವುದರಿಂದ ಮಾಹಿತಿ ಲಭ್ಯವಿರುವುದಿಲ್ಲ.</td></tr>
<tr><td>ಆ)</td><td>ಚಾರ್ ಧಾಮ್ ಮತ್ತು ಕಾಶಿ ಯಾತ್ರೆಯನ್ನು ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಎಷ್ಟು ಮೊತ್ತ ಸಹಾಯಧನವನ್ನು ನಿಗದಿಪಡಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)</td><td>ಕರ್ನಾಟಕ ರಾಜ್ಯದಿಂದ ಚಾರ್‌ಧಾಮ್ ಯಾತ್ರೆ ಕೈಗೊಂಡ ಅರ್ಹ ಯಾತ್ರಾರ್ಥಿಗಳಿಗೆ ತಲಾ ರೂ.20,000/- ಹಾಗೂ ಕಾಶಿ ಯಾತ್ರೆ ಕೈಗೊಂಡ ಅರ್ಹ ಯಾತ್ರಾರ್ಥಿಗಳಿಗೆ ತಲಾ ರೂ.5,000/-ಗಳಂತೆ ಸರ್ಕಾರದ ಸಹಾಯಧನವನ್ನು ನಿಗದಿಪಡಿಸಲಾಗಿರುತ್ತದೆ.</td></tr>
<tr><td>ಇ)</td><td>ಸಹಾಯಧನ ಪಡೆಯಲು ಇರುವ ಮಾನದಂಡಗಳೇನು; ಆರ್ಥಿಕ ವರ್ಷ 2022 ರಿಂದ 2024 ರವರೆಗೆ ಸಹಾಯಧನ ಪಡೆದ ಒಟ್ಟು ಯಾತ್ರಾರ್ಥಿಗಳ ಸಂಖ್ಯೆ ಎಷ್ಟು; ಅರ್ಜಿ ಸಲ್ಲಿಸಿದ ಒಟ್ಟು ಯಾತ್ರಾರ್ಥಿಗಳಿಗೆ ಸಹಾಯಧನ ನೀಡಲಾಗಿದೆಯೇ; ಅರ್ಜಿ ಸಲ್ಲಿಸಿದ ಪೈಕಿ ಎಷ್ಟು ಅರ್ಜಿಗಳನ್ನು ಯಾವ ಕಾರಣಕ್ಕಾಗಿ ತಿರಸ್ಕರಿಸಲಾಗಿದೆ; (ಮಾಹಿತಿ ನೀಡುವುದು)</td><td>ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ, ಚಾರ್‌ಧಾಮ್ ಮತ್ತು ಕಾಶಿಯಾತ್ರೆ ಕೈಗೊಂಡ ಯಾತ್ರಾರ್ಥಿಗಳು ಸರ್ಕಾರದ ಸಹಾಯಧನ ಪಡೆಯಲು ಇರುವ ಮಾನದಂಡಗಳ ಕುರಿತು ಸರ್ಕಾರದ ಆದೇಶ ಸಂಖ್ಯೆ: ಕಂಇ 166 ಮುಅಬಿ 2022 ದಿನಾಂಕ:21.02.2024ರ ಮಾರ್ಗಸೂಚಿಯನ್ನು ಅನುಬಂಧದಲ್ಲಿ ಒದಗಿಸಿದೆ.<br><br>2022 ರಿಂದ 2024 ರವರೆಗೆ ಸಹಾಯಧನ ಪಡೆದ ಯಾತ್ರಾರ್ಥಿಗಳ ಅರ್ಜಿ ವಿವರ ಈ ಕೆಳಕಂಡಂತಿದೆ.
<table>
<tr><th>ಅರ್ಜಿ ಸಲ್ಲಿಸಿದ ಒಟ್ಟು ಯಾತ್ರಾರ್ಥಿಗಳು ಸಂಖ್ಯೆ</th><th>ಸಹಾಯಧನ ನೀಡಲಾದ ಯಾತ್ರಾರ್ಥಿಗಳ ಸಂಖ್ಯೆ</th><th>ತಿರಸ್ಕೃತವಾದ ಅರ್ಜಿಗಳ ಸಂಖ್ಯೆ</th><th>ತಿರಸ್ಕೃತವಾಗಲು ಕಾರಣಗಳು</th></tr>
<tr><td>59,416</td><td>28,759</td><td>30,657</td><td>ಸರ್ಕಾರದ ಮಾರ್ಗಸೂಚಿಯಂತೆ ಸಮೂಚಿತ ಮಾರ್ಗದಲ್ಲಿ ಅರ್ಜಿ ಮತ್ತು ದಾಖಲೆಗಳನ್ನು ಸಲ್ಲಿಸದ</td></tr>
</table></td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಇರುವ ಕಾರಣ ತಿರಸ್ಕೃತಗೊಂಡಿರುತ್ತದೆ. |
| ಈ) | ಈ ಕುರಿತು ಸಾರ್ವಜನಿಕರಿಗೆ ಜಾಹೀರಾತು ನೀಡಲಾಗುತ್ತಿದೆಯೇ; ನೀಡುತ್ತಿದ್ದಲ್ಲಿ; ಜಾಹೀರಾತು ನೀಡಿದ ಕುರಿತು ಮಾಹಿತಿ ನೀಡುವುದು ಹಾಗೂ ಮೇಲಿನ ಎಲ್ಲಾ ಅಂಶಗಳ ಕುರಿತು ಸಂಪೂರ್ಣ ಮಾಹಿತಿ ನೀಡುವುದು; | 2023-24ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ, ಚಾರ್‌ಧಾಮ್ ಮತ್ತು ಕಾಶಿ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳು ಸರ್ಕಾರದ ಸಹಾಯಧನವನ್ನು ಪಡೆಯಲು ಅರ್ಜಿಗಳನ್ನು ಆಹ್ವಾನಿಸಿ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ: ಚಾರ್‌ಧಾಮ್ ಮಾನಸ ಸರೋವರ/ಸಿಆರ್/3/2023-24 ದಿನಾಂಕ: 02.11.2023 ರಲ್ಲಿ ಪ್ರತಿಯೊಂದು ಯಾತ್ರೆಗೆ ಸಂಬಂಧಿಸಿದಂತೆ ಅರ್ಹತೆಗಳ ಕುರಿತು ವಿವರಗಳನ್ನೊಳಗೊಂಡಂತೆ ಜಾಹಿರಾತು ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. |
| ಉ) | ಸದರಿ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಸರ್ಕಾರದಿಂದ ನೀಡುವ ಸಹಾಯಧನವನ್ನು ಯಾವ ಆಧಾರದ ಮೇಲೆ ನಿಗದಿಪಡಿಸಲಾಗುತ್ತದೆ; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ, ಚಾರ್‌ಧಾಮ್ ಮತ್ತು ಕಾಶಿಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ಸರ್ಕಾರದಿಂದ ಆಯವ್ಯಯದಲ್ಲಿ ಒದಗಿಸುವ ಅನುದಾನ ಲಭ್ಯತೆಯನ್ನು ಆಧರಿಸಿ ಸರ್ಕಾರದ ಮಾರ್ಗಸೂಚಿಯನ್ವಯ ಸಹಾಯಧನವನ್ನು ನಿಗದಿಪಡಿಸಲಾಗಿರುತ್ತದೆ. |
| ಊ) | ಸರ್ಕಾರದಿಂದ ನೀಡುವ ಸಹಾಯಧನವನ್ನು ಕಡಿತಗೊಳಿಸುವ ಮತ್ತು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಕಡಿತಗೊಳಿಸಿದ್ದಲ್ಲಿ ಸ್ಪಷ್ಟ ಕಾರಣಗಳನ್ನು ತಿಳಿಸುವುದು; (ಈ ಕುರಿತು ಸಂಪೂರ್ಣ ಕಾರಣದೊಂದಿಗೆ ವಿವರ ನೀಡುವುದು) | ಭಾರತ್ ಗೌರವ್ ಕಾಶಿಯಾತ್ರೆಯನ್ನು ಈ ಸರ್ಕಾರವು ಅಸ್ತಿತ್ವಕ್ಕೆ ಬಂದ ನಂತರ ಗಯಾ ಕ್ಷೇತ್ರಕ್ಕೆ ವಿಸ್ತರಿಸಿದ್ದು, ಇದರಿಂದ ಪ್ರಯಾಣ ದರವು ತಲಾ ರೂ. 22,500/- ಆಗಲಿದ್ದು, ಯಾತ್ರಾರ್ಥಿಗಳಿಗೆ ಆರ್ಥಿಕ ಹೊರೆ ಆಗಬಾರದೆಂಬ ದೃಷ್ಟಿಯಿಂದ, ಸಹಾಯದನ ಮೊತ್ತವನ್ನು ಹೆಚ್ಚಿಸಿದ್ದು, ಪ್ರತಿ ಯಾತ್ರಾರ್ಥಿಗಳಿಗೆ ರೂ. 17500/-ಗಳನ್ನು ಸರ್ಕಾರದಿಂದ ಭರಿಸಲಾಗುತ್ತದೆ. ಇದರಲ್ಲಿ ಈ ಕೆಳಕಂಡ ಶುಲ್ಕಗಳು ಒಳಗೊಂಡಿರುತ್ತವೆ.<br>i. ರೈಲ್‌ನ ಶುಲ್ಕ,<br>ii. ವೈದ್ಯಕೀಯ ವೆಚ್ಚ<br>iii. ಸಾರಿಗೆ ವೆಚ್ಚ<br>iv. ತಂಗಲು ಕೊಠಡಿ ವೆಚ್ಚ<br>v. ಊಟ ಮತ್ತು ಉಪಹಾರ ವೆಚ್ಚ ಹಾಗೂ<br>vi. ಇತರೆ ವೆಚ್ಚಗಳು.<br><br>ಉಳಿದಂತೆ, ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ, ಚಾರ್‌ಧಾಮ್‌ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ಸರ್ಕಾರದಿಂದ ಆಯವ್ಯಯದಲ್ಲಿ ಒದಗಿಸುವ ಅನುದಾನ ಲಭ್ಯತೆಯನ್ನು ಆಧರಿಸಿ ಸಹಾಯಧನವನ್ನು ನೀಡುತ್ತಿರುವುದರಿಂದ ಈ ಸಹಾಯಧನವನ್ನು ಕಡಿತಗೊಳಿಸುವ ಮತ್ತು ಹೆಚ್ಚಿಸುವ ಕುರಿತು ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: ಕಂಇ 103 ಮುಸಪ್ರ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ಕರ್ನಾಟಕ ಸರ್ಕಾರ

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, 4ನೇ ಮಹಡಿ,
ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು -18.
ದೂರವಾಣಿ: 26709689/ 26706775, ಫ್ಯಾಕ್ಸ್ :26700801/Email: endowmentcommissioner@gmail.com

ಸಂಖ್ಯೆ: ಚಾರ್‌ಧಾಮ್ ಮಾನಸಸರೋವರ/ಸಿಆರ್/03/2023-24 ದಿನಾಂಕ:04.11.2023.

ಗೆ,
ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ,
ವಾರ್ತಾ ಸೌಧ, ಸಂಖ್ಯೆ:17,
ಭಗವಾನ್ ಮಹಾವೀರ ರಸ್ತೆ
ಬೆಂಗಳೂರು.

ಮಾನ್ಯರೆ,

ವಿಷಯ: 2023-24ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ, ಚಾರ್‌ಧಾಮ್ ಮತ್ತು ಕಾಶಿ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ಸರ್ಕಾರದ ಸಹಾಯಧನ ವಿತರಿಸುವ ಬಗ್ಗೆ.

***

ವಿಷಯಕ್ಕೆ ಸಂಬಂಧಿಸಿದಂತೆ 2023-24ನೇ ಸಾಲಿನಲ್ಲಿ, ಕರ್ನಾಟಕ ರಾಜ್ಯದಿಂದ ಕೈಲಾಸ ಮಾನಸ ಸರೋವರ, ಚಾರ್‌ಧಾಮ್ ಮತ್ತು ಕಾಶಿಯಾತ್ರೆ ಕೈಗೊಂಡಿರುವ ಯಾತ್ರಾರ್ಥಿಗಳಿಗೆ ಸರ್ಕಾರದ ಸಹಾಯಧನವನ್ನು ವಿತರಿಸುವ ಸಂಬಂಧ ಅರ್ಜಿ ಸಲ್ಲಿಸಲು ದಿನಾಂಕ:06.11.2023ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಲಗತ್ತಿಸಿರುವ ಪ್ರಕಟಣೆಯನ್ನು "ವಿಜಯವಾಣಿ, ವಿಜಯಕರ್ನಾಟಕ, ಪ್ರಜಾವಾಣಿ, ಕನ್ನಡಪ್ರಭಾ, ಉದಯವಾಣಿ, Deccan Herald ಮತ್ತು ಸಂಯುಕ್ತ ಕರ್ನಾಟಕ" ದಿನಪತ್ರಿಕೆಗಳಲ್ಲಿ ಪ್ರಚುರಪಡಿಸುವಂತೆ ಕೋರಿದೆ.
(ಕ.ಟಿ.ಆ.ಮೇ)

ತಮ್ಮ ನಂಬುಗೆಯ

ಆಯುಕ್ತರ ಪರವಾಗಿ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ
ಚಾಮರಾಜಪೇಟೆ, ಬೆಂಗಳೂರು.



Generated from eOffice by MADEV NARASANNAVAR, RD-ASS-MUZ(MN), ASSISTANT, REVENUE DEPATMENT SEC on 24/07/2024 05:26 PM

ಕರ್ನಾಟಕ ಸರ್ಕಾರ

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು -18.
ದೂರವಾಣಿ: 26709689/ 26706775, ಫ್ಯಾಕ್ಸ್ :26700801/Email: endowmentcommissioner@gmail.com

ಸಂಖ್ಯೆ: ಚಾರ್‌ಧಾಮ್ ಮಾನಸಸರೋವರ/ಸಿಆರ್/03/2023-24 ದಿನಾಂಕ:02.11.2023.

-:ಪತ್ರಿಕಾ ಪ್ರಕಟಣೆ:-

2023-24ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಕಾಶಿ ಯಾತ್ರೆ ಕೈಗೊಂಡ 30000 ಯಾತ್ರಾರ್ಥಿಗಳಿಗೆ ತಲಾ ರೂ.5000/-ಗಳಂತೆ ಸರ್ಕಾರದ ಸಹಾಯಧನವನ್ನು ವಿತರಿಸುವ ಕುರಿತು ಅರ್ಜಿಯನ್ನು ದಿನಾಂಕ:06.11.2023ರಿಂದ ಆಹ್ವಾನಿಸಲಾಗಿದೆ.

ಅರ್ಹತೆಗಳು:

1. ಯಾತ್ರಾರ್ಥಿಗಳು ಕರ್ನಾಟಕದ ಖಾಯಂ ನಿವಾಸಿಗಳಾಗಿರತಕ್ಕದ್ದು.
2. 18ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು.
3. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.12.2023 ಸಂಜೆ 04:00ಗಂಟೆಯೊಳಗೆ ಸಲ್ಲಿಸಬೇಕು.
4. ಯಾತ್ರಾರ್ಥಿಯು ಯಾತ್ರೆಗೆ ತೆರಳುವ ಮುನ್ನ ಆನ್‌ಲೈನ್ ಮೂಲಕವೇ ಅರ್ಜಿಯನ್ನು https://karnatakayatras.com/ ಪೋರ್ಟಲ್‌ನಲ್ಲಿ ಅಥವಾ ಮೊಬೈಲ್ ಆಫ್ **(karnataka.yatras)** ಮೂಲಕವೇ ಸಲ್ಲಿಸಿ ಉಳಿದ ಪ್ರಕ್ರಿಯೆಗಳನ್ನು ಯಾತ್ರೆಗೆ ತೆರಳಿದ ನಂತರ ಪೂರ್ಣಗೊಳಿಸಬೇಕು.
5. ಕಾಶಿಯಾತ್ರೆ ಕೈಗೊಂಡಿರುವುದನ್ನು ದೃಢೀಕರಿಸುವ ಸಲುವಾಗಿ ಕಾಶಿ ವಿಶ್ವನಾಥಸ್ವಾಮಿ ದೇವಾಲಯದ 5 ಕಿ.ಮೀ. ವ್ಯಾಸ (Radius) ದೊಳಗೆ ಯಾತ್ರಾರ್ಥಿಗಳ **Geotagged Selfie Photo ಅನ್ನು ಮೊಬೈಲ್ ಆಪ್(karnataka.yatras) / ವೆಬ್ ಸೈಟ್** (www.karnatakayatras.com )ನಲ್ಲಿ ತೆಗೆದು ಆಪ್‌ಲೋಡ್ ಮಾಡಬೇಕು.

ಆಯುಕ್ತರು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ
ಚಾಮರಾಜಪೇಟೆ, ಬೆಂಗಳೂರು.

ಸೂಚನೆ; ಹೆಚ್ಚಿನ ವಿವರಗಳನ್ನು www.karnatakayatras.com website ನಲ್ಲಿ ಪಡೆದುಕೊಳ್ಳಬಹುದಾಗಿದೆ.



enerated from eOffice by MADEV NARASANNAVAR, RD-ASS-MUZ(MN), ASSISTANT, REVENUE DEPATMENT SEC on 24/07/2024 05:26 PM

ಕರ್ನಾಟಕ ಸರ್ಕಾರ

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು -18.
ದೂರವಾಣಿ: 26709689/ 26706775, ಫ್ಯಾಕ್ಸ್ :26700801/Email: endowmentcommissioner@gmail.com

ಸಂಖ್ಯೆ: ಚಾರ್‌ಧಾಮ್ ಮಾನಸಸರೋವರ/ಸಿಆರ್/03/2023-24 ದಿನಾಂಕ:02.11.2023.

-:ಪತ್ರಿಕಾ ಪ್ರಕಟಣೆ:-

2023-24ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಪ್ರಥಮ ಬಾರಿಗೆ ಚಾರ್‌ಧಾಮ್ ಯಾತ್ರೆಯನ್ನು ಕೈಗೊಂಡ ಯಾತ್ರಾರ್ಥಿಗಳಿಗೆ ತಲಾ ರೂ.20,000/-ಗಳಂತೆ ಸರ್ಕಾರದ ಸಹಾಯಧನವನ್ನು ನೀಡುವ ಕುರಿತು ಅರ್ಜಿಗಳನ್ನು ದಿನಾಂಕ: 06.11.2023ರಿಂದ ಆಹ್ವಾನಿಸಲಾಗಿದೆ.

ಅರ್ಹತೆಗಳು:

1. ಯಾತ್ರಾರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರತಕ್ಕದ್ದು.
2. 45ವರ್ಷ ಮೇಲ್ಪಟ್ಟ ಯಾತ್ರಾರ್ಥಿಗಳು ಮಾತ್ರ ಅರ್ಜಿಯನ್ನು ಸಲ್ಲಿಸಬಹುದು.
3. ಯಾತ್ರಾರ್ಥಿಯು ಕಡ್ಡಾಯವಾಗಿ, ಬದರೀನಾಥ್, ಕೇದಾರ್‌ನಾಥ್, ಯಮುನೋತ್ರಿ ಮತ್ತು ಗಂಗೋತ್ರಿ ಕ್ಷೇತ್ರಗಳಿಗೆ ಭೇಟಿ ನೀಡಿರಬೇಕು.
4. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.12.2023 ಸಂಜೆ 4:00ಗಂಟೆಯೊಳಗೆ.
5. ಅನುದಾನ ಲಭ್ಯತೆಗೆ ಅನುಗುಣವಾಗಿ ಸರ್ಕಾರದ ಮಾರ್ಗಸೂಚಿಯನ್ವಯ ಅನುದಾನವನ್ನು ವಿತರಿಸಲಾಗುವುದು.
6. ಯಾತ್ರಾರ್ಥಿಯು ಆನ್‌ಲೈನ್ ಮೂಲಕವೇ **ಮೊಬೈಲ್ ಆಪ್(karnataka.yatras) / ವೆಬ್ ಸೈಟ್** (www.karnatakayatras.com) ಪೋರ್ಟಲ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

| ಅರ್ಜಿ ಸಲ್ಲಿಸಲು ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳು | |
|---|---|
| 1. | ಒಂದು ಭಾವಚಿತ್ರ (ಪಾಸ್‌ಪೋರ್ಟ್ ಅಳತೆ) |
| 2. | ಆಧಾರ್ ಗುರುತಿನ ಚೀಟಿ |
| 3. | ಚುನಾವಣಾ ಗುರುತಿನ ಚೀಟಿ |
| 4. | ರೂ. 20/-ಗಳ ಛಾಪಾ ಕಾಗದದಲ್ಲಿ ಸ್ವ-ದೃಢೀಕರಣ |
| 7. | ಯಾತ್ರೆ ಕೈಗೊಳ್ಳುವ ಮುನ್ನ ಯಾತ್ರೆಗೆ ನೊಂದಾಯಿಸಿಕೊಂಡ ಪ್ರತಿ |
| 8. | ಯಾತ್ರೆ ಮುಗಿದ ನಂತರ ಉತ್ತರಖಾಂಡ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ನೀಡಲಾದ ಪ್ರಮಾಣ ಪತ್ರ (ಕಡ್ಡಾಯವಾಗಿ 4 ಧಾಮಗಳು ನಮೂದಾಗಿರತಕ್ಕದ್ದು). |
| 9. | ಯಾತ್ರಾರ್ಥಿಯ ಆಧಾರ್ ಸಂಖ್ಯೆಯು ಕಡ್ಡಾಯವಾಗಿ ಬ್ಯಾಂಕ್‌ಗೆ ಸೀಡ್ ಆಗಿರತಕ್ಕದ್ದು. |

ಸೂಚನೆ; ಹೆಚ್ಚಿನ ವಿವರಗಳನ್ನು www.karnatakayatras.com website ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಆಯುಕ್ತರು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ
ಚಾಮರಾಜಪೇಟೆ, ಬೆಂಗಳೂರು.



Generated from eOffice by MADEV NARASANNAVAR, RD-ASS-MUZ(MN), ASSISTANT, REVENUE DEPATMENT SEC on 24/03/2024 05:26 PM

ಕರ್ನಾಟಕ ಸರ್ಕಾರ

ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು -18.
ದೂರವಾಣಿ: 26709689/ 26706775, ಫ್ಯಾಕ್ಸ್ :26700801/Email: endowmentcommissioner@gmail.com

ಸಂಖ್ಯೆ: ಚಾರ್‌ಧಾಮ್ ಮಾನಸಸರೋವರ/ಸಿಆರ್/03/2023-24 ದಿನಾಂಕ:02.11.2023.

-:ಪತ್ರಿಕಾ ಪ್ರಕಟಣೆ:-

2023-24ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಪ್ರಥಮ ಬಾರಿಗೆ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಕೈಗೊಂಡ ಯಾತ್ರಾರ್ಥಿಗಳಿಗೆ ತಲಾ ರೂ.30,000/-ಗಳಂತೆ ಸರ್ಕಾರದ ಸಹಾಯಧನವನ್ನು ನೀಡುವ ಕುರಿತು ಅರ್ಜಿಗಳನ್ನು ದಿನಾಂಕ: 06.11.2023ರಿಂದ ಆಹ್ವಾನಿಸಲಾಗಿದೆ.

ಅರ್ಹತೆಗಳು:

1. ಯಾತ್ರಾರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರತಕ್ಕದ್ದು.
2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.12.2023 ಸಂಜೆ 4:00ಗಂಟೆಯೊಳಗೆ.
3. ಅನುದಾನ ಲಭ್ಯತೆಗೆ ಅನುಗುಣವಾಗಿ ಸರ್ಕಾರದ ಮಾರ್ಗಸೂಚಿಯನ್ವಯ ಅನುದಾನವನ್ನು ವಿತರಿಸಲಾಗುವುದು.
4. ಯಾತ್ರಾರ್ಥಿಯು ಆನ್‌ಲೈನ್ ಮೂಲಕವೇ **ಮೊಬೈಲ್ ಆಪ್(karnataka.yatras) / ವೆಬ್ ಸೈಟ್** (www.karnatakayatras.com ) ಪೋರ್ಟಲ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

| ಅರ್ಜಿ ಸಲ್ಲಿಸಲು ಕಡ್ಡಾಯವಾಗಿ ಅಪ್‌ಲೋಡ್ ಮಾಡಬೇಕಾದ ದಾಖಲೆಗಳು | |
|---|---|
| 1. | ಒಂದು ಭಾವಚಿತ್ರ (ಪಾಸ್‌ಪೋರ್ಟ್ ಅಳತೆ) |
| 2. | ಆಧಾರ್ ಗುರುತಿನ ಚೀಟಿ |
| 3. | ಚುನಾವಣಾ ಗುರುತಿನ ಚೀಟಿ |
| 4. | ರೂ. 20/-ಗಳ ಛಾಪಾ ಕಾಗದದಲ್ಲಿ ಸ್ವ-ದೃಢೀಕರಣ |
| 5. | ಸದರಿ ಯಾತ್ರೆಯನ್ನು ಕೇಂದ್ರ ಸರ್ಕಾರದ ಮಾರ್ಗವಾಗಿ ತೆರಳಿದಲ್ಲಿ ಕೇಂದ್ರ ಸರ್ಕಾರದ ವತಿಯಿಂದ ನೀಡಲಾಗುವ ದೃಢೀಕರಣವನ್ನು ನೀಡತಕ್ಕದ್ದು |
| 6. | ಯಾತ್ರೆಯನ್ನು ನೇಪಾಳ / ಟಿಬೆಟ್ ಮಾರ್ಗವಾಗಿ ತೆರಳಿದ್ದಲ್ಲಿ ಲಾಹ್ಸ, ಚೈನಾ ಸರ್ಕಾರದ ವತಿಯಿಂದ ನೀಡಲಾದ (C.I.P.S.C) ಪ್ರತಿಯನ್ನು ಒದಗಿಸತಕ್ಕದ್ದು |
| 7. | ಗ್ರೂಪ್ ವೀಸಾ (Group Visa) |
| 8. | ಪಾಸ್‌ಪೋರ್ಟ್‌ನ ಮೊದಲ ಹಾಗೂ ಕೊನೆಯ ಪ್ರತಿ, ಮತ್ತು ಸೀಲ್ ಇರುವಂತಹ ಪ್ರತಿಯ ಕಲರ್ ಜೆರಾಕ್ಸ್. |
| 9. | ಯಾತ್ರಾರ್ಥಿಯ ಆಧಾರ್ ಸಂಖ್ಯೆಯು ಕಡ್ಡಾಯವಾಗಿ ಬ್ಯಾಂಕ್‌ಗೆ ಸೀಡ್ ಆಗಿರತಕ್ಕದ್ದು. |

ಸೂಚನೆ; ಹೆಚ್ಚಿನ ವಿವರಗಳನ್ನು www.karnatakayatras.com website ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಆಯುಕ್ತರು
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ
ಚಾಮರಾಜಪೇಟೆ, ಬೆಂಗಳೂರು.



Generated from eOffice by MADEV NARASANNAVAR, RD-ASS-MUZ(MN), ASSISTANT, REVENUE DEPATMENT SEC on 24/07/2024 05:36 PM